ಎಸ್.ಸಿ.ಸಂಖ್ಯೆಃ 10047/2025
ಪ್ರಾ.ಸಾ.ಸಂಖ್ಯೆಃ 09
ಚಾ.ಸಾ.ಸಂಖ್ಯೆಃ 13

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆ:10047/2025**

| | |
|---|---|
| ಹೆಸರುಃ | ಚನ್ನಪ್ಪ ಕುಂಬಾರ |
| ತಂದೆಯ ಹೆಸರುಃ | ಶಂಕ್ರೆಪ್ಪ |
| ವಯಸ್ಸುಃ | 38 ವರ್ಷ |
| ಉದ್ಯೋಗಃ | ಸಿ.ಪಿ.ಸಿ. 1695, ಮುಧೋಳ ಪೋಲೀಸ ಠಾಣೆ |
| ವಾಸಃ | ಮುಧೋಳ |

**(ಸರ್ಕಾರಿ ಅಭಿಯೋಜಕರು ಹಾಜರಾಗಿಲ್ಲದೇ ಇದ್ದರೂ ಕೂಡ ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಹಾಗೂ ಸಾಕ್ಷಿದಾರರು ಪೋಲೀಸ ಪೇದೆ ಇದ್ದು ಸ್ವತಃ ಸಾಕ್ಷ್ಯ ನುಡಿಯಲು ತಯಾರು ಇರುವುದರಿಂದ ಅವರ ಸಾಕ್ಷಿಯನ್ನು ಪಡೆಯಲಾಯಿತು.)**

**ಸಾಕ್ಷಿಯನ್ನು ದಿನಾಂಕಃ 09.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸ್ವತಃ-**

ನಾನು 2015 ರಿಂದ ಇಲ್ಲಿಯವರೆಗೆ ಮುಧೋಳ ಪೋಲೀಸ ಠಾಣೆಯಲ್ಲಿ ಪಿ.ಸಿ. ಆಗಿ ಕೆಲಸ ಮಾಡುತ್ತಿದ್ದೇನೆ.

1. ದಿಃ 27.02.2021 ರಂದು ರಾತ್ರಿ 10.15 ಗಂಟೆಗೆ ಚಾಸಾ-19 ಇವರು ಈ ಪ್ರಕರಣದ ಮೂಲ ದೂರು ಹಾಗೂ ಪ್ರಥಮ ವರ್ತಮಾನ

ವರದಿಗಳನ್ನು ನನಗೆ ನ್ಯಾಯಾಲಯಕ್ಕೆ ತಲುಪಿಸಲು ನೀಡಿದ್ದು ಅವುಗಳು ಈಗ ನಾನು ನೋಡುತ್ತಿರುವ ದೂರು ಹಾಗೂ ಪ್ರಥಮ ವರ್ತಮಾನ ವರದಿಗಳು ಇರುತ್ತವೆ. (ಸದರಿ ದೂರನ್ನು ಈಗಾಗಲೇ ನಿಪಿ-11 ಅಂತಾ ಗುರುತಿಸಲಾಗಿದೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-15 ಅಂತಾ ಗುರುತಿಸಲಾಯಿತು.)

2. ಸದರಿ ಪ್ರಥಮ ವರ್ತಮಾನ ವರದಿ ಹಾಗೂ ದೂರುಗಳನ್ನು ರಾತ್ರಿ 10.30 ಗಂಟೆಗೆ ನ್ಯಾಯಾಧೀಶರ ಗೃಹ ಕಚೇರಿಗೆ ತಲುಪಿಸಿ ಈಗ ನೋಡುತ್ತಿರುವ ನಿಪಿ-1 ರಂತೆ ವರದಿಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ 2 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ. ಎ.ಎಮ್.ಎಮ್. ವಕೀಲರಿಂದಃ**

1. ನನಗೆ ಪ್ರಥಮ ವರ್ತಮಾನ ವರದಿ ಹಾಗೂ ದೂರುಗಳನ್ನು ನ್ಯಾಯಾಲಯಕ್ಕೆ ತಲುಪಿಸಲು ಮೌಖಿಕವಾಗಿ ಆದೇಶಿಸಲಾಗಿತ್ತು. ಚಾಸಾ-19 ನನಗೆ ಪ್ರಥಮ ವರ್ತಮಾನ ವರದಿ ಹಾಗೂ ದೂರುಗಳನ್ನು ನೀಡಿಲ್ಲ, ನಾನು ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-19 ನನ್ನ ಮೇಲಾಧಿಕಾರಿ ಇರುವುದರಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಎಸ್.ಸಿ.ಸಂಖ್ಯೆಃ 10047/2025
ಪ್ರಾ.ಸಾ.ಸಂಖ್ಯೆಃ 09
ಚಾ.ಸಾ.ಸಂಖ್ಯೆಃ 13

**ಪಾಟೀ ಸವಾಲುಃ 1 ನೇ ಆರೋಪಿತರ ಪರವಾಗಿ ವಕೀಲರು ಅದೇ ಪಾಟೀಸವಾಲನ್ನೇ ಅನ್ವಯಿಸಿಕೊಳ್ಳುತ್ತಾರೆ ಅಂತಾ ತಿಳಿಸಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

Sd/-

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**